ದಿನಾಂಕ:13.05.2022ರಂದು ಬೆಳಿಗ್ಗೆ 10.30 ಗಂಟೆಗೆ ಶಿವನಗರ ವಾರ್ಡ್ ನಂ. 107 ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರವನ್ನು ದಿನಾಂಕ: 16.05.2022ರಂದು ಸಲ್ಲಿಸುವ ಕುರಿತು.

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ
2. ಶ್ರೀ ಸುಬ್ರಮಣಿ.ಆರ್. ಕಂದಾಯ ಮೌಲ್ಯಮಾಪಕರು
3. ಶ್ರೀ ಅನಿಕೇಶ್, ಹಿರಿಯ ಆರೋಗ್ಯ ಪರಿವೀಕ್ಷರು,
4. ಶ್ರೀ ಶಿವಕುಮಾರಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ವಿಜಯಕುಮಾರ್, ಮಾರ್ಷಲ್
6. ಶ್ರೀ ಮುನಿನಂಜಪ್ಪ, ಸದಸ್ಯರು
7. ಶ್ರೀ ಪ್ರಕಾಶ್ ಚವರಸ್, ಸದಸ್ಯರು
8. ಶ್ರೀ ಮಂಜುನಾಥ್, ಸದಸ್ಯರು
9. ಶ್ರೀ ಆರ್. ಶ್ರೀನಿವಾಸ್, ಸದಸ್ಯರು
10. ಶ್ರೀ ಕನಕೇಶ್, ಸದಸ್ಯರು
11. ಶ್ರೀ ಲಿಂಗನಗೌಡ,
12. ಶ್ರೀ ಪ್ರಥಾಪ್, ಸದಸ್ಯರು
13. ಶ್ರೀ ಕುಮಾರ್, ಸದಸ್ಯರು
14. ಶ್ರೀ ಶಿವರಾಮ್, ಅರಣ್ಯ ಇಲಾಖೆ

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 107ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ವಾರ್ಡ್ ನಂ. 107ರ ಪ್ರದೇಶ ವ್ಯಾಪ್ತಿಯಲ್ಲಿ ಹೇರಳವಾಗಿ ರಸ್ತೆ ಗುಂಡಿ ಬಿದ್ದು, ಜನ ಸಾಮಾನ್ಯರು ನಡೆದಾಡಲು ತೊಂದರೆಯಾಗಿದೆ ಎಂದು ಒಕ್ಕರಲುನಿಂದ ಸಭೆಗೆ ತಿಳಿಸಿರುತ್ತಾರೆ. ಅದಕ್ಕೆ ವಾರ್ಡ್ ಅಭಿಯಂತರರು ಈಗಾಗಲೇ ಕಾಮಗಾರಿಯು ಅನುಮೋದನೆಗೊಂಡು ಟೆಂಡರ್ ಪ್ರೊಸಸ್ ಮುಗಿದು, ಶ್ರೀ ಶಂಕರ್ ಎಂಬುವವರಿಗೆ ಗುತ್ತಿಗೆ ವಹಿಸಿದ್ದು, ಪ್ರಸ್ತುತ ಮಳೆ ಬೀಳುವುದರಿಂದ ಡಾಂಬರು ಮಿಶ್ರಣ ಹಾಕಲು ಸ್ವಲ್ಪ ವಿಳಂಭವಾಗುತ್ತದೆ.
2. ವಾರ್ಡ್ ನಂ. 107ರ ಮೋಟಪ್ಪ ಉಧ್ಯಾನವನದಲ್ಲಿ ಒಣಗಿರುವ ಮರಗಳನ್ನು ತುರ್ತಾಗಿ ಕತ್ತರಿಸಿ, ಉಧ್ಯಾನವನದಲ್ಲಿ ದುರಸ್ಥಿಗೆ ಬಂದಿರುವ ಜಿಮ್ ಐಟಂಗಳನ್ನು ತುರ್ತಾಗಿ ದುರಸ್ಥಿಗೆ ಒಳಪಡಿಸಿ ಉಧ್ಯಾನವನದಲ್ಲಿ ದಿನನಿತ್ಯ ವಾಯು ವಿಹಾರಕ್ಕೆ ಬರುವ ಜನ ಸಾಮಾನ್ಯರು ಸರಳತೆಯಿಂದ ಬಯ ಬೀತಿ ಇಲ್ಲದೆ ವಾಯು ವಿಹಾರವನ್ನು ಪಡೆಯುವ ಸಲುವಾಗಿ ಪಾದಚಾರಿ ಮಾರ್ಗದಲ್ಲಿ ಸಂಚರಿಸುತ್ತಾ ಹಾಗೂ ಯಂತ್ರೋಪಕರಣಗಳಲ್ಲಿ ವ್ಯಾಯಾಮ ಮಾಡಲು ಅನುವು ಮಾಡಿಕೊಡಬೇಕಾಗಿ ಸಂಬಂಧಿಸಿದ ಅರಣ್ಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯವರಿಗೆ ಸಭೆಯಲ್ಲಿ ಒಕ್ಕಲರಿಂದ ಸಭೆಯಲ್ಲಿ ತಿಳಿಸಲಾಯಿತು. ಅದರಂತೆ ಕೆಲವು ಭಾಗಗಳಲ್ಲಿ ಗುಂಡಿ ಮುಚ್ಚುವ ಕೆಲಸ ಪ್ರಗತಿಯಲ್ಲಿದ್ದು, ಪ್ರಸ್ತುತ ದಿನಗಳಲ್ಲಿ ಮಳೆ ಬೀಳುವುದರಿಂದ ಸ್ವಲ್ಪ ದಿನಗಳ ಮಟ್ಟಿಗೆ ಕೆಲಸ ಸ್ಥಗಿತಗೊಳಿಸಲಾಗಿರುತ್ತದೆ.

ಪು.ತಿ.ನೋ.

Scanned by CamScanner

3. ಬೀದಿ ದೀಪಗಳ ಬಗ್ಗೆ ಸಮರ್ಪಕವಾಗಿ ಕೆಲಸ ನಡೆಯುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದಾಗ, ಸಂಬಂಧಿಸಿದ ವಾರ್ಡ್ ಅಭಿಯಂತರರುಗಳಿಗೆ ಮಾನ್ಯ ನೋಡಲ್ ಅಧಿಕಾರಿಗಳೆ ದೂರವಾಣಿ ಮುಖಾಂತರ ಚರ್ಚಿಸಿ, ಕೆಲಸವನ್ನು ತುರ್ತಾಗಿ ಬೀದಿ ದೀಪಗಳನ್ನು ನಿರ್ವಣೆ ಮಾಡುವಂತೆ ಜಮಿಲ್ ಅಭಿಯಂತರರಿಗೆ ಸೂಚಿಸಲಾಗಿದೆ.

4. ನೋಡಲ್ ಅಧಿಕಾರಿಗಳು, ವಾರ್ಡಿನಲ್ಲಿ ಒಣಗಿರುವ ಮತ್ತು ಕಡಿದಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸುವಂತೆ ಸೂಚಿಸಿದರು. ಸಭೆಯಲಿದ್ದ ಸದಸ್ಯರು ಹಾಗೂ ನೋಡಲ್ ಅಧಿಕಾರಿಗಳು ರಸ್ತೆಯಲ್ಲಿ ಬಿದ್ದಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸಲು ವಿಳಂಭ ಮಾಡುತ್ತಿರುವ ಬಗ್ಗೆ ಚರ್ಚಿಸಲಾಯಿತು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರಿಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸುವಂತೆ ತಿಳಿಸಿದರು.

5. ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಪೈಪ್ ಅಳವಡಿಸುವ ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ. ಆದರೆ ಮಳೆ ಬಂದ ಮೇಲೆ ಪೈಪ್ ಅಳವಡಿಸಿರುವ ಜಾಗದಲ್ಲಿ ಮಣ್ಣು ಕುಸಿದಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಕಾಮಗಾರಿಯು ಪ್ರಗತಿಯಲ್ಲಿದ್ದು, ಕುಸಿದಿರುವ ಜಾಗವನ್ನು ದುರಸ್ಥಿಪಡಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ತಿಳಿಸುವ ದೂರುಗಳನ್ನು ಸರಿಪಡಿಸಿ, ಮುಂದಿನ ಸಭೆಯಲ್ಲಿ ವರದಿಯನ್ನು ನೀಡುವಂತೆ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 107

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು

Scanned by CamScanner